ಸಚಿವರು ಆಸ್ಪತ್ರೆಗೆ ಬಂದು ಅಲ್ಲಿ ವಿಚಾರ ಮಾಡಿ ಒಂದು ತೀರ್ಮಾನ ಮಾಡಿದ್ದಾರೆ, ಅದು ಸರಿ. ಆದರೆ ನನಗೆ ಗೊತ್ತಿರುವ ಹಾಗೆ ಅಲ್ಲಿರುವ ಡಿ.ಎಂ.ಇ ಹಾಗೂ ಸರ್ಕಾರದಲ್ಲಿ ಇರುವ ಕಾರ್ಯದರ್ಶಿಗಳ ಜೊತೆಯಲ್ಲಿ ಸರಿಯಾಗಿ ಹೊಂದಾಣಿಕೆ, ನನಗೆ ಗೊತ್ತಿರುವ ಪ್ರಕಾರ ಇಲ್ಲ ಎಂದು ಕೇಳಿದ್ದೇನೆ. ಆ ರೀತಿ ಇದ್ದರೆ ತಕ್ಷಣ ಸರ್ಕಾರದ ಗಮನಕ್ಕೆ ಬರುತ್ತಿತ್ತು. ಈ ಉಪಕರಣಗಳು ಕೆಟ್ಟಿದ್ದರೂ ಸಹ ಏತಕ್ಕೆ ಸುಮ್ಮನೆ ಕುಳಿತಿದ್ದರು. I am making a direct allegation that at the D.M.E. and the Secretary level there is no co-orporation or co-ordination with hospital authorities. You have taken the hospital authorities very lightly. I want an answer on that point. When they have asked for a service contract, the Government sits on it. If that is the case, how do you serve the patients ?

ಶ್ರೀ ಜಿ. ರಾಮಕೃಷ್ಣ : ಹೊಂದಾಣಿಕೆ ಇಲ್ಲ ಎನ್ನತಕ್ಕ ಮಾತನ್ನು ನಾನು ಒಪ್ಪುವುದಿಲ್ಲ. ಹೊಂದಾಣಿಕೆ ಇಲ್ಲದಿದ್ದರೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ. ಹೊಂದಾಣಿಕೆ ಅಲ್ಲಿ ಇದೆ. ಅದಕ್ಕೆ ಹೆಚ್ಚು ಹಣ ತಗಲುತ್ತದೆ. ಡಿ.ಎಂ.ಇ.ಯವರಿಗಾಗಲೀ ಅಥವಾ ಸುಪರಿಂಡೆಂಟ್‌ರವರಿಗಾಗಲೀ ಇದನ್ನು ಮಾಡಲು ಆಗುವುದಿಲ್ಲ. ಇದನ್ನು ಸರ್ಕಾರವೇ ಮಾಡಬೇಕಾಗುತ್ತದೆ. ಆದ್ದರಿಂದ ಸಂಬಂಧ ಪಟ್ಟವರಿಗೆ ಹೇಳಿದ್ದೇನೆ. ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ ಕೂಡಲೇ ರಿಪೇರಿ ಮಾಡಿಸಿ ಎಂದು ಆದೇಶ ನಾನು ನೀಡಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಸರ್ವಿಸ್ ಕಾಂಟ್ರ್ಯಾಕ್ಟ್ ಇದೆ .....

ಅಧ್ಯಕ್ಷರು : ಅವರು ಭೇಟಿ ಕೊಟ್ಟು ಸರಿ ಮಾಡಿಸಲು ಆದೇಶ ನೀಡಿದ್ದೇನೆ ಎಂದು ಹೇಳಿದ್ದಾರೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ದಿನಾಂಕ 3.3.1993 ರ ಲಿಖಿತ ಮೂಲಕ ಉತ್ತರಿಸುವ 11ನೇ ಪಟ್ಟಿಯಲ್ಲಿರುವ 54 ಪ್ರಶ್ನೆಗಳ ಸಂಖ್ಯೆ : 1208, 1318, 1198, 1190, 1196, 1316, 1317, 1319, 1191, 566, 893, 356, 355, 1139, 1092, 1193, 960, 1185, 1064, 1066, 1063, 780, 425, 1201, ಮತ್ತು 1200. ಪ್ರಶ್ನೆಗಳನ್ನು ಹೊರತು ಪಡಿಸಿ, ಇನ್ನು ಉಳಿದ 28 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

<u>ಪ್ರಶ್ನೋತ್ತರ ಕಾಲ ಮುಗಿಯಿತು.</u>

ವಿಷಯ : ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ ಮತ್ತು ವಿದ್ಯಾತರಬೇತಿ ಕೇಂದ್ರಗಳ ಸ್ಥಾಪನೆ.

1266

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ